# ಡಾ. ಎಂ. ಶಿವರಾಂ

'ರಾಶಿ' ಎಂಬ ಕಾವ್ಯನಾಮದ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದ ಡಾ.ಎಂ.ಶಿವರಾಂ, ವೈದ್ಯರೊಬ್ಬರು ಸಾಹಿತ್ಯ ಕ್ಷೇತ್ರಕ್ಕೆ ಎಂತಹ ಅಮೂಲ್ಯ ಸೇವೆ ಸಲ್ಲಿಸಬಹುದು ಎಂಬುದಕ್ಕೆ ಇಂದಿಗೂ ಮಾದರಿಯಾಗಿದ್ದಾರೆ.

ಡಾ.ರಾ.ಶಿವರಾಂ ('ಶಿವರಾಮ' ಹೆಸರು 'ರಾಮಶಿವ' ಆಗಿ ರೂಪಾಂತರ ಹೊಂದಿ, ಬಳಿಕ ಅದು 'ರಾಶಿ' ಕಾವ್ಯನಾಮವಾಯಿತು) ವಿಪುಲ ಸಾಹಿತ್ಯ ಕೃಷಿ ಕೈಗೊಂಡರು. ಅದಕ್ಕೆ ಫಲವಾಗಿ ಹಲವಾರು ಪ್ರಶಸ್ತಿ ಗೌರವಗಳು ಅವರನ್ನು ಅರಸಿ ಬಂದವು.

'ರಾಶಿ' ಅಧ್ಯಕ್ಷಾವಧಿಯಲ್ಲಿ ಅಕಾಡೆಮಿ ಕೈಗೊಂಡ ಕೆಲವು ಪ್ರಮುಖ ಕಾರ್ಯಗಳಿವು: ಕಾರಣಾಂತರಗಳಿಂದ ಹಿಂದಿನ ಮೂರು ವರ್ಷಗಳಲ್ಲಿ ಪ್ರಕಟವಾದ ಕನ್ನಡ ಪುಸ್ತಕಗಳಿಗೆ ಬಹುಮಾನ ನೀಡಲಾಗಿರಲಿಲ್ಲ. 'ರಾಶಿ' ಅದಕ್ಕೆ ವ್ಯವಸ್ಥೆ ಮಾಡಿದರು. ಯುವ ಬರಹಗಾರರಿಗಾಗಿ ತರಬೇತಿ ಶಿಬಿರಗಳನ್ನು ನಡೆಸಿದರು. ಇತರ ರಾಜ್ಯಗಳ ಸಾಹಿತ್ಯಾಭಿವೃದ್ಧಿಯ ಬಗೆಗಿನ ಅರಿವು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಪೂರಕ ಎಂಬುದನ್ನು ಅರಿತಿದ್ದ ರಾಶಿಯವರು, ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು ಯೋಜಿಸಿ ಇಲ್ಲಿನ ಸಾಹಿತಿಗಳನ್ನು ಬೇರೆ ರಾಜ್ಯಗಳಿಗೆ ಕಳುಹಿಸುವ ಹಾಗೂ ಅಲ್ಲಿನ ಬರಹಗಾರರನ್ನು ಇಲ್ಲಿಗೆ ಬರಮಾಡಿಕೊಳ್ಳುವ ಕಾರ್ಯವನ್ನು ನಡೆಸಿದರು.

ಶ್ರೀರಂಗ (ಆದ್ಯ ರಂಗಚಾರ್ಯ) ಅವರ ಅವಧಿಯಲ್ಲೇ ಪ್ರಾರಂಭಗೊಂಡಿದ್ದ 'ಸಾಂಸ್ಕೃತಿಕ ವಿನಿಮಯ' ಯೋಜನೆ ರಾಶಿ ಅವರ ಕಾಲದಲ್ಲಿ ಹೆಚ್ಚು ವ್ಯಾಪಕಗೊಂಡಿತು. ಹೊರರಾಜ್ಯಗಳಲ್ಲಿ ನೆಲೆಸಿದ ಕನ್ನಡಿಗರು ನಡೆಸುವ ಸಂಘ–ಸಂಸ್ಥೆಗಳಿಗೆ ಕನ್ನಡ ಪುಸ್ತಕಗಳನ್ನು ದಾನವಾಗಿ ನೀಡಲಾಯಿತು. ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದಂತೆ ಎರಡು ಜಿಲ್ಲಾ ಮಟ್ಟದ ಮತ್ತು ಒಂದು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳು ನಡೆದವು. ಶ್ರೇಷ್ಠ ಗ್ರಂಥಕರ್ತರಿಗೆ ಪ್ರಶಸ್ತಿ, ಪುಸ್ತಕ ಪ್ರಕಟಣೆಗಾಗಿ ಆರ್ಥಿಕ ನೆರವು ನೀಡಲಾಯಿತು. ರಾಶಿಯವರು ೧೯೭೭ರಿಂದ ೧೯೮೦ರವರೆಗೆ ಅಕಾಡೆಮಿಯ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸಿದರು.